# ಕಿರುತೆರೆಯಲ್ಲಿ ಏನು ನೋಡೋಣ?

ಕಿರುತೆರೆ ಮನೆಯಲ್ಲೇ ಕೂತು, ಬೇಕೆನಿಸಿದಾಗ ನೋಡಬಹುದಾದ ಮಾಧ್ಯಮ. ಆದರೆ ಇಲ್ಲಿಯ ಕಾರ್ಯಕ್ರಮಗಳು ಅಂತಹ ಅವಕಾಶವನ್ನೇ ಕೊಡಲಾರವು. ತಲೆಚಿಟ್ಟು ಹಿಡಿಸುವ, ಮನಸ್ಸಿಗೆ ಹೆಚ್ಚು ದುಗುಡ ಕೊಡುವ ಧಾರಾವಾಹಿಗಳು, ಎಲ್ಲ ರೀತಿಯಲ್ಲೂ ಅನ್‌ರಿಯಲ್ ಆದ ರಿಯಾಲಿಟಿ ಶೋಗಳು, ಕೀಳು ದರ್ಜೆಯ ಹಾಸ್ಯ, ಅದಕ್ಕಿಂತ ಕೀಳಾದ ಸನ್ನಿವೇಶಗಳು, ನಿರೂಪಕರ ಅರ್ಥವಿಲ್ಲದ ಮಾತುಗಳು, ಬೆಳಗಿನ ಜಾವವೇ ಪ್ರಾರಂಭವಾಗುವ ಜ್ಯೋತಿಷ್ಯ, ಭವಿಷ್ಯ, ನೂರಾರು ವ್ರತಗಳ ಸಲಹೆ, ಸೂಚನೆಗಳು. ಇವೆಲ್ಲವುಗಳ ಮಧ್ಯೆ ಅಶ್ಲೀಲ, ಅಸತ್ಯ, ಅತಿಶಯೋಕ್ತಿಯ ಜಾಹೀರಾತುಗಳು. ಇವುಗಳಿಂದ ನಮ್ಮ ಬೇಸರ ಕಳೆದು, ಮನೋಲ್ಲಾಸ ಪಡೆಯಲು ಸಾಧ್ಯವಾದೀತೆ?

—ಶ್ರೀನಾಥ್ ಕೊನೇಟಿ, ಬೆಂಗಳೂರು

# ನಗು ತರಿಸದ 'ಕಿಲಾಡಿ..'

ಝೀ ಟಿವಿಯಲ್ಲಿ 'ಶ್ರೀಮಾನ್ ಶ್ರೀಮತಿ' ಹಾಸ್ಯ ಧಾರಾವಾಹಿ ಬಹಳ ಚೆನ್ನಾಗಿ ಮೂಡಿ ಬರುತ್ತಿತ್ತು. ಅದರ ಗುಣಮಟ್ಟ ಮತ್ತು ಸಂಭಾಷಣೆಗಳು ಮೇಲ್ಮಟ್ಟದಲ್ಲಿದ್ದವು. ಆದರೆ ಇಂತಹ ಸುಂದರ ಧಾರಾವಾಹಿಯನ್ನು ಬದಲಾಯಿಸಿ, 'ಕಿಲಾಡಿ ಸಂಸಾರ'ವೆಂಬ ಕಾರ್ಯಕ್ರಮ ಪ್ರಸಾರ ಮಾಡುತ್ತಿರುವುದು ಸರಿಯಲ್ಲ. ಕತೆಗಳು ಬಹಳ ಕೆಟ್ಟದಾಗಿವೆ. ಹೆಂಡತಿ ಗಂಡನನ್ನು, ಮಾವನನ್ನು ಹೊಡೆಯುವುದು, ಅತ್ತೆಯನ್ನು ಒದೆಯುವುದು ಎಲ್ಲಾದರೂ ಉಂಟೆ? ಇಂತಹ ಕೆಟ್ಟ ಕತೆಗಳನ್ನು ಬಿತ್ತರಿಸಿದರೆ ನೋಡುಗರು ಇದನ್ನು ಕಲಿಯಬೇಕೇ? ಕತೆ ಜೊತೆ ಸಂಭಾಷಣೆಗಳು ಸಹ ದ್ವಂದ್ವಾರ್ಥದಿಂದ ಕೂಡಿವೆ. ಇದನ್ನು ನೋಡುತ್ತಿದ್ದರೆ ಅಯ್ಯೋ ಎಂತಹ ಧಾರಾವಾಹಿ ಎಂದು ಬೇಸರವಾಗುತ್ತಿದೆ. ನಗುವಂತೂ ಬರುವುದಿಲ್ಲ.

ದ್ವಂದ್ವಾರ್ಥ ಮತ್ತು ಕೀಳು ಸಾಹಿತ್ಯವನ್ನು ನಿಲ್ಲಿಸಿ ಶ್ರೀಮಾನ್ ಶ್ರೀಮತಿ ಮತ್ತೆ ಪ್ರಸಾರ ಮಾಡಿ.

— ಎಂ. ಸುಬ್ಬಣ್ಣ, ಬೆಂಗಳೂರು

# ಚಂದದ ಮಹಾದೇವಿ

ಝೀ ಕನ್ನಡ ವಾಹಿನಿಯಲ್ಲಿ ರಾತ್ರಿ ಎಂಟೂವರೆಗೆ ಪ್ರಸಾರವಾಗುವ 'ಮಹಾದೇವಿ' ಧಾರಾವಾಹಿ ಚೆನ್ನಾಗಿದೆ. ಆದರೆ ಅರ್ಧ ಗಂಟೆಯಲ್ಲಿ ಹಿಂದಿನ ದಿನ ನಡೆದಿದ್ದ ಕಥೆಯನ್ನೇ ಮೂರು ಮೂರು ಬಾರಿ ತೋರಿಸುತ್ತಾರೆ. ಮುಂದಿನ ಭಾಗದಲ್ಲಿ ಅಂತ ಎರಡು ಮೂರು ಬಾರಿ ತೋರಿಸಿ, ಕೊನೆಗೆ ಮುಂದಿನ ಸಂಚಿಕೆಯಲ್ಲಿ ಅಂತ ತೋರಿಸಿ ಮುಕ್ತಾಯವಾಗುತ್ತದೆ. ಎರಡು ದಿನ ತೋರಿಸಬೇಕಾದ ಕಥೆಯ ಭಾಗವನ್ನು ಒಂದು ವಾರ ಎಳೆದೂ ಎಳೆದೂ ಇಷ್ಟಿಷ್ಟೆ ತೋರಿಸುತ್ತಾರೆ. ನಮಗಿಷ್ಟವಿದ್ದರೂ ನೋಡಲು ಆಗುವುದಿಲ್ಲ.

— ಲೀಲಾ ಚಂದ್ರಶೇಖರ್, ಬೆಂಗಳೂರು

ವಾರದ ಪತ್ರ

# ಸೆಲೆಬ್ರಿಟಿಗಳ ಸಂದೇಶ ಏನು?

ಜನಪ್ರಿಯ ಟಿ.ವಿ. ಕಾರ್ಯಕ್ರಮಗಳನ್ನು ಹೆಚ್ಚು ಜನರು ವೀಕ್ಷಣೆ ಮಾಡುತ್ತಾರೆ. 'ವೀಕೆಂಡ್ ವಿತ್ ರಮೇಶ್' ಅಂತಹ ಒಂದು ಕಾರ್ಯಕ್ರಮ. ಜುಲೈ ಒಂದು ಮತ್ತು ಎರಡರಂದು ಪ್ರಸಾರವಾದ ಕಾರ್ಯಕ್ರಮದಲ್ಲಿ 'ಗೋಲ್ಡನ್ ಸ್ಟಾರ್ ಗಣೇಶ್' ಸಾಧಕರ ಕುರ್ಚಿಯಲ್ಲಿ ಕುಳಿತಿದ್ದರು. ಸಿನಿಮಾದಲ್ಲಿ ಈ ಮಟ್ಟಕ್ಕೆ ಏರಲು ತುಂಬಾ ಕಷ್ಟಪಟ್ಟಿರುವುದು, ಚಿತ್ರಾನ್ನ ತಿಂದುಕೊಂಡು ದಿನ ಕಳೆದಿರುವುದು, ಯಾವುದೋ ಆರ್ಕೆಸ್ಟ್ರಾಗಳಲ್ಲಿ ಡ್ಯಾನ್ಸ್ ಮಾಡಿರುವುದು ಎಲ್ಲಾ ಸರಿ.

ಆದರೆ ತಮ್ಮ ಧೂಮಪಾನದ, ಮದ್ಯಪಾನದ ಅಭ್ಯಾಸಗಳನ್ನು ಜಗಜ್ಜಾಹೀರುಗೊಳಿಸುವ ಅಗತ್ಯವಿತ್ತೇ? ಅವರಾಗಿ ತಿಳಿಸುವ ತನಕ ಇದೆಲ್ಲ ನಮಗೂ ತಿಳಿಯದು. ಚಿತ್ರಾನ್ನದಲ್ಲಿ ಉಳಿದ 5 ರೂಪಾಯಿಯನ್ನು ಕಿಂಗ್ ಸಿಗರೇಟ್ ಕೊಳ್ಳಲು, ಆರ್ಕೆಸ್ಟ್ರಾದಲ್ಲಿ ಕುಣಿದದ್ದು 'ಎಣ್ಣೆ ಏಟು' ಎಂದು ವೈಭವೀಕರಿಸಿದ್ದು ಸರಿಯಲ್ಲ. ಇಂಥವರನ್ನೇ 'ಐಕಾನ್' ಎಂದು ತಿಳಿದುಕೊಂಡವರಿಗೆ, ಕೋಟಿಗಟ್ಟಲೆ ಯುವ ಜನರಿಗೆ ಏನು ಸಂದೇಶ ಸಿಗುತ್ತದೆ ಎನ್ನುವುದನ್ನು ಕಾರ್ಯಕ್ರಮ ನಿರ್ವಾಹಕರು, ವಾಹಿನಿಯವರು ಗಮನಿಸಬೇಕು. ಈಗಾಗಲೇ ಈ ಎರಡೂ ಪಿಡುಗುಗಳ ಬಗ್ಗೆ ಸಾಕಷ್ಟು ತೊಂದರೆಗಳನ್ನು ಸಮಾಜ ಅನುಭವಿಸುತ್ತಿದೆ. ಈ ಬಗ್ಗೆ ನಾವೆಲ್ಲರೂ ಸೇರಿ ಏನಾದರೂ ಪರಿಹಾರ ಕಂಡು ಹಿಡಿವ ದಿಸೆಯಲ್ಲಿ ಪ್ರಯತ್ನ ಮಾಡಬೇಕಿದೆ. ದಯಮಾಡಿ ಇಂತಹ ಪ್ರಮಾದ ಆಗದಂತೆ ಎಚ್ಚರ ವಹಿಸಿ.

—ರತ್ನಜ, ಮೈಸೂರು

# ಮಾಹಿತಿಗೆ ಯಾಕೆ ಸಂಗೀತ?

ಚಂದನ ವಾಹಿನಿಯಲ್ಲಿ ರಾತ್ರಿ 9.30 ಕ್ಕೆ ಪ್ರಸಾರವಾಗುವ 'ಥಟ್ ಅಂತ ಹೇಳಿ' ಕಾರ್ಯಕ್ರಮವನ್ನು ನಾವು ಪ್ರತಿ ನಿತ್ಯ ತಪ್ಪದೇ ನೋಡುತ್ತೇವೆ. ಕೊನೆಯಲ್ಲಿ ಡಾ. ಸೋಮೇಶ್ವರ ಅವರು ಒಂದು ಹೊಸ ವಿಷಯದ ಬಗ್ಗೆ ಮಾಹಿತಿ ಕೊಡುತ್ತಾರೆ, ಆಗ ಹಿನ್ನೆಲೆ ಸಂಗೀತ ಅಳವಡಿಕೆಯಾಗಿರುತ್ತದೆ. ಅದರಿಂದ ಮಾಹಿತಿ ಸರಿಯಾಗಿ ತಿಳಿಯುವುದಿಲ್ಲ. ಈ ಹಿನ್ನೆಲೆ ಸಂಗೀತ ನಿಲ್ಲಿಸಲು ಚಂದನ ವಾಹಿನಿಯವರು ಗಮನ ಹರಿಸುತ್ತಾರೆಯೇ?

— ಚಂದ್ರಶೇಖರ್ ಎಚ್.ಬಿ. ಬೆಂಗಳೂರು.

# ಜೈ ಹೋ ಅನುಶ್ರೀ

'ಝೀ' ವಾಹಿನಿಯಲ್ಲಿ ಜುಲೈ ಒಂದರಂದು 'ಸ ರೆ ಗ ಮ ಪ' ಕಾರ್ಯಕ್ರಮದಲ್ಲಿ ನಿರೂಪಕಿ ಅನುಶ್ರೀಯವರು ನೀಟಾಗಿ ತಲೆ ಬಾಚಿ, ತುರುಬನ್ನು ಕಟ್ಟಿ, ಮೈಸೂರು ಮಲ್ಲಿಗೆಯ ದಂಡೆಯನ್ನು ಮುಡಿದು, ಸೀರೆಯನ್ನುಟ್ಟು ತಿಳಿಹಾಸ್ಯದ ಇತಿಮಿತಿಯೊಳಗೆ ಜನಮನ ಗೆದ್ದರು.

ಮೈಸೂರು ಹರ್ಷ ಹಾಡಿನ ಉದ್ದಕ್ಕೂ, ಪಕ್ಷಿ ಮತ್ತು ಪ್ರಾಣಿಗಳ ಕೂಗಿನ ಸ್ವರಗಳನ್ನು ಬದಲಾಯಿಸುತ್ತಾ ಲಯಬದ್ಧವಾಗಿ ಹಾಡಿ, ಆಕರ್ಷಿಸಿದರು. ಸಾಧನೆಯ ಮೆಟ್ಟಿಲಲ್ಲಿ ಇರುವವರ ಅಮೋಘ ಸಾಧನೆಗೆ, ಅವರ ಕಂಠ ಸಿರಿಗೆ, ಸೀಜನ್—13ರ ಉತ್ತಮ ಹಾಡುಗಾರರಿಗೆ, ವೇದಿಕೆಯ ಮೇಲೆ ಕಾಣಿಸಿಕೊಂಡು ಕನ್ನಡಿಗರಿಗೆ, ಸಂಗೀತದ ರಸಾಮೃತವನ್ನು ಉಣಿಸಿದ ಎಲ್ಲರಿಗೂ ನಮನ!

—ಲಲಿತಾ ಅಂಬಾಗಿಲು, ಉಪ್ಪುಂದ

# ಸೂಪರ್ ಜೋಡಿಯ ರಾಧ ರಮಣ

ಕಲರ್ಸ್‌ನ 'ರಾಧ ರಮಣ'ದ ಪ್ಲಸ್ ಪಾಯಿಂಟ್ ಎಂದರೆ, ರಾಧ, ರಮಣ ಜೋಡಿ. ಉಳಿದಂತೆ ಅದೆ ಸೇಡು ಹಣದಾಸೆಗೋಸ್ಕರ ತಾಯಿ ಮಗನ ಮಧ್ಯೆ ಹೊಂದಾಣಿಕೆ ಇಲ್ಲದಂತೆ ಮಾಡುವುದು, ಆಸ್ತಿಗೋಸ್ಕರ ಮನೆಯಲ್ಲಿ ಗಲಾಟೆ ಎಬ್ಬಿಸುವುದು. ರಾಧ, ರಮಣ ಪಾತ್ರಧಾರಿಗಳು ತುಂಬಾ ಚೆನ್ನಾಗಿ ನಟಿಸಿದ್ದಾರೆ. ಅದರಲ್ಲೂ ರಮಣ ನಟಿಸುವ ಶೈಲಿಯಂತೂ ಚೆನ್ನಾಗಿದೆ. ಆತ ಸುಂದರವಾಗಿಯೂ ಕಾಣುತ್ತಾನೆ. ಉಳಿದ ಕಲಾವಿದರೆಲ್ಲರೂ ಅವರವರ ಪಾತ್ರಕ್ಕೆ ನ್ಯಾಯ ಸಲ್ಲಿಸುತ್ತಿದ್ದಾರೆ. ಅಗ್ನಿಸಾಕ್ಷಿ ಒಂದನ್ನು ಬಿಟ್ಟರೆ ಉಳಿದ ಧಾರಾವಾಹಿಗಳನ್ನು ನೋಡುವುದಕ್ಕೆ ಬೇಸರ. ಆ ಬೇಸರ ನೀಗಿಸಲು ರಾಧ ರಮಣ ಧಾರಾವಾಹಿ ಅರ್ಥಪೂರ್ಣ ಎಂದೆನಿಸುತ್ತದೆ.

—ಬಿ. ವಿಶ್ವನಾಥ್ ಅರಸ್, ಮೈಸೂರು

# ಅವಮಾನಕರ ದೃಶ್ಯ

ಕಲರ್ಸ್ ಕನ್ನಡದಲ್ಲಿ ನಟ ಸೃಜನ್ ಲೋಕೇಶ್ ನಡೆಸಿ ಕೊಡುತ್ತಿರುವ 'ಮಜಾ ಟಾಕೀಸ್' ಕಾರ್ಯಕ್ರಮದಲ್ಲಿ ಇತ್ತೀಚೆಗೆ 'ನಾನೊಬ್ನೇ ಒಳ್ಳೇವ್ನು' ಚಿತ್ರ ತಂಡದವರು ಭಾಗವಹಿಸಿದ್ದರು. ಎಸ್.ಕೆ. ಭಗವಾನ್‌ರವರು ಸಹ ಭಾಗವಹಿಸಿದ್ದು ಸಂತೋಷವಾಯಿತು. ಆದರೆ ವೇದಿಕೆಯಲ್ಲಿ ಚಿತ್ರದ ನಾಯಕಿಯರಾದ ಅನಿಮೆನ್ನಿಸ್ ಹಾಗೂ ಸೌಜನ್ಯ ನಡುವೆ ಭಗವಾನ್ ಕುಳಿತಿದ್ದರು. ಇಂದಿನ ಯುವ ನಟಿಯರಂತೆ ಅರೆಬರೆ ಬಟ್ಟೆ ತೊಟ್ಟಿದ್ದ ಅವರು ಕಾಲು ಮೇಲೆ ಕಾಲು ಹಾಕಿಕೊಂಡು ಕುಳಿತಿದ್ದ ದೃಶ್ಯ ನೋಡಿದಾಗ ಭಗವಾನ್‌ರಂತಹ ಹಿರಿಯರಿಗೆ ತೋರಿಸಿದ ಅಗೌರವ ಎಂದು ನನಗೆ ಅನ್ನಿಸಿತು. ಸಭ್ಯತೆಗೂ ಆದ್ಯತೆ ಇದ್ದರೆ ಚೆಂದ.

—ಬಿ.ಚಾಮರಾಜ ಅರಸ್, ಮೈಸೂರು